ಮೂಲ ದಾವಾ ನಂ. 107/2014

ಪಿ. ಡಬ್ಲುಃ 1

ಸಾಕ್ಷಿಯನ್ನು ದಿನಾಂಕ: 17-09-2022 ರಂದು ಕರೆಯಿಸಿ ಪ್ರಮಾಣ ವಚನ ಮಾಡಿಸಲಾಯಿತು.

**ಪಾಟೀ ಸವಾಲುಃಶ್ರೀ ಜಿ. ವಿ. ಬಿ. ವಕೀಲರಿಂದಃ**

ಮೃತ ರಾಮಚಂದ್ರ ಜಟ್ಟಿ ನಾಯ್ಕ ನನ್ನ ತಂದೆ. ಪ್ರತಿವಾದಿ 1 ಎ ನನ್ನ ತಾಯಿ ಎಂದರೆ ಸರಿ . ಅವರು ಇಬ್ಬರೂ ಈಗ ಮೃತಪಟ್ಟಿರುತ್ತಾರೆ. 2 ನೇ ಪ್ರತಿವಾದಿ ನನ್ನ ಅಕ್ಕ. 3 ಮತ್ತು 4 ನೇ ಪ್ರತಿವಾದಿಯರು ನನ್ನ ತಂಗಿಯಂದಿರು. ನನ್ನ ತಂದೆ ತಾಯಿಗೆ ನಾಲ್ಕು ಜನ ಹೆಣ್ಣು ಮಕ್ಕಳು ಎಂದರೆ ನಾನು ಮತ್ತು 2 ರಿಂದ 4 ನೇ ಪ್ರತಿವಾದಿಯರು ಎಂದರೆ ಸರಿ . ನನ್ನ ತಂದೆ ತಾಯಿಗೆ ಯಾವುದೇ ಗಂಡು ಮಕ್ಕಳು ಇಲ್ಲ ಎಂದರೆ ಸರಿ . ನನ್ನ ಮದುವೆ 2008 ರಲ್ಲಿ ಆಗಿರುತ್ತದೆ. ನನ್ನ ಗಂಡನ ಮನೆ ಅಡಕಾರ ಗ್ರಾಮದಲ್ಲಿದೆ. ಅಡಕಾರ ಗ್ರಾಮ ನನ್ನ ತವರು ಮನೆಯಿಂದ 10 ಕಿ ಮೀ ಅಂತರದಲ್ಲಿದೆ. ನಾನು 10 ನೇ ತರಗತಿಯವರೆಗೆ ವಿದ್ಯಾಭ್ಯಾಸ ಮಾಡಿರುತ್ತೇನೆ. ನನ್ನ ಅಕ್ಕತಂಗಿಯರ ಪೈಕಿ ಎಲ್ಲರ ಮದುವೆ ಆಗಿರುತ್ತದೆ.

ನನ್ನ ತಂದೆ ಜೀವಂತ ಇದ್ದಾಗ ಅವರ ಕುಟುಂಬದ ಎಲ್ಲಾ ವ್ಯವಹಾರವನ್ನು ಅವರೇ ನೋಡಿಕೊಳ್ಳುತ್ತಿದ್ದರು ಎಂದರೆ ಸರಿ . ಈ ದಾವೆಯನ್ನು ಮಾಡಲು ನನ್ನ ಚಿಕ್ಕಪ್ಪ ಕೃಷ್ಣಪ್ಪ ಜಟ್ಟಿ ನಾಯ್ಕರಿಂದ ಮಾಹಿತಿ ಪಡೆದುಕೊಂಡಿರುತ್ತೇನೆ. ಈಗ ಅವರು ಮೃತಪಟ್ಟಿರುತ್ತಾರೆ. ಆಗ ವಿಚಾರಿಸಿದಾಗ ನನ್ನ ತಂದೆಯವರು ಕೂಡಾ ಮಾಹಿತಿಯನ್ನು ಕೊಟ್ಟಿರುತ್ತಾರೆ. ದಾವೆ ಮಾಡುವ ಎಷ್ಟು ವರ್ಷಗಳ ಮೊದಲು ದಾವಾ ಆಸ್ತಿಗಳು ಮಾರಾಟವಾಗಿದ್ದವು ಎಂದರೆ ಸಾಕ್ಷಿ ಅದು ನನಗೆ ಗೊತ್ತಿಲ್ಲ, ದಾವೆ ದಾಖಲಿಸುವ 15 ದಿನಗಳ ಪೂರ್ವದಲ್ಲಿ ಮಾರಾಟವಾದ ವಿಚಾರ ಗೊತ್ತಾಯಿತು ಎಂದು ನುಡಿಯುತ್ತಾರೆ. ಮಾಹಿತಿ ಗೊತ್ತಾದ ಮೇಲೆ ದಾಖಲೆಗಳನ್ನು ನನ್ನ ಚಿಕ್ಕಪ್ಪ ಪಡೆದು ತಯಾರಿಸಿಕೊಟ್ಟಿರುತ್ತಾರೆ. ನನ್ನ ಚಿಕ್ಕಪ್ಪ ಮಾಹಿತಿಯನ್ನು ಕೊಟ್ಟಿದ್ದು ಬಿಟ್ಟರೆ ದಾಖಲೆಯನ್ನು ಕೊಟ್ಟಿರುವುದಿಲ್ಲ. ನನ್ನ ಮೋಸವಾಗಿರುವುದು ದಾಖಲೆ ಪಡೆದ ಮೇಲೆ ಗೊತ್ತಾಗಿರುತ್ತದೆ. ಎಲ್ಲಾ ಕಛೇರಿಗಳಿಗೂ ಹೋಗಿ ನಾನೇ ಎಲ್ಲಾ ದಾಖಲೆ ಪಡೆದಿರುತ್ತೇನೆ. ಏನೇನು ದಾಖಲೆ ಪಡೆದಿದ್ದೇನೆ ಎಂದು ಈಗ ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿಗೆ ಸಂಬಂಧಿಸಿದಂತೆ ನಾನು ಯಾವುದೇ ವರ್ಷದ ಆರ್ ಟಿ ಸಿ ಪಡೆದಿರುವುದಿಲ್ಲ. ಮತ್ತೆ ಯಾವ ದಾಖಲೆ ಪಡೆದಿದ್ದೀರಾ ಎಂದರೆ ಸಾಕ್ಷಿ ಮತ್ತೆ ಯಾವುದೇ ದಾಖಲೆ ಪಡೆದಿರುವುದಿಲ್ಲ ಎಂದು ನುಡಿಯುತ್ತಾರೆ.

(ಈ ಹಂತದಲ್ಲಿ ಮುಂದುವರಿದ ಪಾಟೀ ಸವಾಲಿಗೆ ವಕೀಲರು ಸಮಯ ಕೇಳಿದ್ದು ಸಮಯ ನೀಡಲಾಯಿತು )

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆಯಂತೆ ಗಣಕೀಕೃತಗೊಳಿಸಲಾಯಿತು.)

ಓ ಹೆ ಕೇ ಸರಿ ಇದೆ.

Sd/-

ಪ್ರಧಾನ ಸಿವಿಲ್ ನ್ಯಾಯಾಧೀಶರು, ಹೊನ್ನಾವರ.